
## ನಾಟಕೀಯ




**ಹಿರಿಯ** ಪತ್ರಕರ್ತ ಪ್ರೇಮಕುಮಾರ್ ಹರಿಯಬ್ಬೆಯವರ ನಾಲ್ಕನೇ ಕಥಾಸಂಕಲನ 'ನಾಟಕೀಯ'. ಈ ಸಂಕಲನದ ಹತ್ತು ಕಥೆಗಳು ವಸ್ತು ವೈವಿಧ್ಯ ಹಾಗೂ ಅನುಭವ-ನಿರೂಪಣೆಯಲ್ಲಿನ ಪ್ರಾಮಾಣಿಕತೆಯಿಂದಾಗಿ ಗಮನಸೆಳೆಯುತ್ತವೆ. ಗ್ರಾಮವೊಂದರ ಕಲಾರಸಿಕರು ನಾಟಕವಾಡುವ ಸಂದರ್ಭದ ಪೇಚು ಫಜೀತಿಗಳ 'ನಾಟಕೀಯ' ಕಥೆಯನ್ನು ಹೊರತುಪಡಿಸಿದರೆ, ಉಳಿದ ಕಥೆಗಳಲ್ಲಿ ನಾಟಕೀಯತೆಯ ಅಂಶ ಕಡಿಮೆ.

'ಅವ್ವ ತೋರಿದ ದಾರಿ' ಸಂಕಲನದ ಉತ್ತಮ ಕಥೆಗಳಲ್ಲೊಂದಾಗಿರುವಂತೆಯೇ, ಪ್ರೇಮಕುಮಾರರ ಕಥನಪ್ರತಿಭೆಯ ಸಮರ್ಥ ಅಭಿವ್ಯಕ್ತಿಯಂತೆಯೂ ಕಾಣಿಸುತ್ತದೆ. ಪಟದಲ್ಲಿನ ವ್ಯಕ್ತಿಯನ್ನು ತಾತನೆಂದು ಮಗನಿಗೆ ಪರಿಚಯಿಸುವ ತಾಯಿಯೊಬ್ಬಳು, ಆ ತಾತನಂತೆ ನೀನೂ ಆಗಬೇಕು ಎನ್ನುವ ಕನಸನ್ನು ಕರುಳಕುಡಿಗೆ ತುಂಬುತ್ತಾಳೆ. ಪಟದಲ್ಲಿನ ಆ ವ್ಯಕ್ತಿ ತನ್ನಂತೆ ಬೆಳಕಿಗಾಗಿ ಹಂಬಲಿಸುವ ಎಲ್ಲ ಮಕ್ಕಳಿಗೂ ಅಜ್ಜನೆನ್ನುವುದು ಕಥಾನಾಯಕನಿಗೆ ನಿಧಾನವಾಗಿ ಅರಿವಾಗುತ್ತದೆ. ಈ ಮಣ್ಣಿನ ಲಕ್ಷಾಂತರ ಜನರ ಬದುಕು ಮತ್ತು ವ್ಯಕ್ತಿತ್ವದ ಮೇಲೆ ಅಂಬೇಡ್ಕರ್ ಬೀರಿರುವ ಪ್ರಭಾವವನ್ನು ಅರ್ಥಪೂರ್ಣವಾಗಿ ಕಟ್ಟಿಕೊಡುವ ಮೂಲಕ ಸಹೃದಯರ ಮನಸ್ಸಿನಲ್ಲುಳ್ಳಿಯುತ್ತದೆ.

ಸಂಕಲನದ ಮತ್ತೊಂದು ಮುಖ್ಯ ಕಥೆ 'ಆಕ್ರಮಣ'. ಎಲ್ಲರಿಗೂ ಬೇಕಾದವನಾಗಿದ್ದ ಟೈಲರ್ ಮೊಹಿದ್ದೀನ್, ಒಮ್ಮಿಂದೊಮ್ಮೆಗೇ ಊರಿಗೆ ಅನ್ಯನೆನ್ನಿಸುವ ಪರಿಸ್ಥಿತಿಯನ್ನು ಕಥೆ ಮಾರ್ಮಿಕವಾಗಿ ಚಿತ್ರಿಸುತ್ತದೆ. ಹಳ್ಳಿಯ ಗೋಮಾಳವನ್ನು ಲಪಟಾಯಿಸಲು ನಡೆಯುವ ರಾಜಕಾರಣವೂ ಕಥೆಯಲ್ಲಿದೆ. ಧರ್ಮ ಮತ್ತು ರಾಜಕಾರಣದ ಗೆರೆ ಅಳಿಸಿಹೋಗುತ್ತಿರುವುದು ಊರುಕೇರಿಗಳು ಹಾಗೂ ಸಮಾಜದ ಅನಾರೋಗ್ಯಕ್ಕೆ ಕಾರಣವಾಗುತ್ತಿರುವುದನ್ನು ಚಿತ್ರಿಸುವ ಈ ಕಥೆ, ಕ್ಷುಲ್ಲಕ ರಾಜಕಾರಣದ ಎದುರು ಊರಿನ ಅಂತಃಕರಣ ಜಾಗೃತಗೊಳ್ಳುವುದನ್ನು ಚಿತ್ರಿಸುವ ಮೂಲಕ, ಈ ಹೊತ್ತಿಗೆ ಅಗತ್ಯವಾದ ಸಾಮಾಜಿಕ ವಿವೇಕವೊಂದನ್ನು ಸಹೃದಯರ ಗಮನಕ್ಕೆ ತರುತ್ತಿದೆ.

ಸಮಾಜದಲ್ಲಿ ಘಟಿಸುತ್ತಿರುವ ತೀವ್ರ ಬದಲಾವಣೆಗಳು ಹಾಗೂ ಅವುಗಳಿಗಿರಬಹುದಾದ ರಾಜಕೀಯ ಅಥವಾ ಧಾರ್ಮಿಕ ಸ್ವರೂಪಕ್ಕೆ ಪ್ರತಿಕ್ರಿಯೆ ರೂಪದಲ್ಲಿ ಇಲ್ಲಿನ ಕಥೆಗಳನ್ನು ನೋಡಬಹುದಾಗಿದೆ. ವಿಫಲ ಸಂಬಂಧಗಳ ಕುರಿತು ಮಾತನಾಡುವ ಈ ಕಥೆಗಳು, ಭಾವುಕ ಹಳಹಳಿಕೆಯಾಗದೆ ಸಾಮಾಜಿಕ ಸ್ಥಿತ್ಯಂತರಗಳನ್ನು ಅರಿಯುವ ಪ್ರಯತ್ನಗಳಾಗಿ ರೂಪುಗೊಂಡಿರುವುದು ಗಮನಾರ್ಹ. 'ನಿರಾಳ', 'ಅನೂಹ್ಯ' ಹಾಗೂ 'ಮುಖ ಕಳೆದುಕೊಂಡವನು' ಕಥೆಗಳು, ಮುರಿದ ಸಂಬಂಧಗಳಿಂದ ಉಂಟಾದ ಮಾನಸಿಕ ಸಂಘರ್ಷವನ್ನು ಚಿತ್ರಿಸುವುದರ ಜೊತೆಗೆ,

**ಲೇ: ಪ್ರೇಮಕುಮಾರ್ ಹರಿಯಬ್ಬೆ; ಪು: 152; ಬೆ: ₹ 160; ಪ್ರ: ಅಂಕಿತ ಪುಸ್ತಕ, ಬೆಂಗಳೂರು.**
**ಫೋ: 9019190502**